ತಯಾರಿಸಲಾಗಿದ್ದು, ಅಂದಾಜು ಪರಿಶೀಲನೆಯಲ್ಲಿದೆ.

ii) ಅನುದಾನದ ಲಭ್ಯತೆಗನುಗುಣವಾಗಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಕ್ರಮ ಕೈಗೊಳ್ಳಲಾಗುವುದು.

ಬೆಂಗಳೂರು ನಗರದಲ್ಲಿರುವ ಬಾರ್ ಮತ್ತು ವೈನ್ ಸ್ಟೋರಗಳ ಪರವಾನಿಗೆ.

687 - ಶ್ರೀ ಟಿ.ಜಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಬೆಂಗಳೂರು ನಗರ ವ್ಯಾಪ್ತಿಯಲ್ಲಿರುವ ಬಾರ್ ಮತ್ತು ರೆಸ್ಟೋರೆಂಟ್ ಹಾಗೂ ವೈನ್ ಸ್ಟೋರಗಳ ಸಂಖ್ಯೆ ಎಷ್ಟು?

2) ಇವುಗಳನ್ನು ತೆರೆಯಲು ಲೈಸನ್ಸ ನೀಡುವಾಗ ಏನೇನು ಕ್ರಮ ಅನುಸರಿಸಲಾಗುತ್ತಿದೆ? (ಪಟ್ಟಿಮಾಡಿ)

3) ಪ್ರಸ್ತುತ ಲೈಸನ್ಸ ಕೋರಿ ಬಂದಿರುವ ಅರ್ಜಿಗಳನ್ನು ಸಂಖ್ಯೆ ಎಷ್ಟು?

ಶ್ರೀ ತಿಪ್ಪೇಸ್ವಾಮಿ (ಅಬಕಾರಿ ಸಚಿವರು) :

1) ಬಾರ್ ಮತ್ತು ರೆಸ್ಟೋರೆಂಟ್ (ಸಿಎಲ್-9) - 1449

ವೈನ್ ಸ್ಟೋರ್ (ಸಿಎಲ್-2) - 922

2) 1968ರ ಕರ್ನಾಟಕ ಅಬಕಾರಿ (ಭಾರತೀಯ ಮದ್ಯ ಮತ್ತು ವಿದೇಶಿ ಮದ್ಯ ಮಾರಾಟ) ನಿಯಮಾವಳಿಗಳ ಹಾಗೂ 1967ರ ಕರ್ನಾಟಕ ಅಬಕಾರಿ ಸನ್ನದುಗಳ (ಸಾಮಾನ್ಯ ಷರತ್ತುಗಳು) ನಿಯಮಾವಳಿಗಳಲ್ಲಿ ನಿಗದಿ ಪಡಿಸಿರುವ ಕ್ರಮವನ್ನು ಪಾಲಿಸಿ ಸನ್ನದುಗಳನ್ನು ನೀಡಲಾಗುತ್ತಿದೆ. ವಿವರಗಳನ್ನು ಪಟ್ಟಿ ಮಾಡಿ ಅನುಬಂಧದಲ್ಲಿ ಸಲ್ಲಿಸಲಾಗಿದೆ.

3) ಪ್ರಸ್ತುತದಲ್ಲಿ ರಾಜ್ಯ ಸರ್ಕಾರದ ಪ್ರವಾಸೋದ್ಯಮದ ಅಭಿವೃದ್ಧಿ ನೀತಿಗೆ ಅನುಗುಣವಾಗಿ ಲೈಸನ್ಸ ಕೋರಿ ಬಂದಿರುವ ಅರ್ಜಿಗಳ ಸಂಖ್ಯೆ :

1) ಬಾರ್ ಮತ್ತು ರೆಸ್ಟೋರೆಂಟ್ (ಸಿಎಲ್-೯) - 02

ಅನುಬಂಧ

1) ಅರ್ಜಿದಾರರು ನಿಗದಿತ ಸನ್ನದು ಸಂದಾಯಿಸಿದ ಚಲನ್ ನಿಗದಿತ ನಮೂನೆಯಲ್ಲಿ ಹಾಗೂ ಇನ್ನಿತರ ಅಗತ್ಯ ದಾಖಲಾತಿಗಳನ್ನು ಸಲ್ಲಿಸಿದ ನಂತರ ಅವುಗಳನ್ನು ಪರಿಶೀಲಿಸುವುದು.

2) ಸಂಬಂಧಪಟ್ಟ ಅಬಕಾರಿ ಅಧಿಕಾರಿಗಳು, ಸ್ಥಳ ತನಿಖೆ ನಡೆಸಿ ಮಹಜರ್ ಮಾಡುವುದು.

3) ಸಾರ್ವಜನಿಕ ಆಕ್ಷೇಪಣೆಗಳಿದ್ದಲ್ಲಿ ವಿಚಾರಣೆ ನಡೆಸಲಾಗುವುದು.

4) 1968ರ ಕರ್ನಾಟಕ ಅಬಕಾರಿ (ಭಾರತೀಯ ಮತ್ತು ವಿದೇಶಿ ಮದ್ಯ ಮಾರಾಟ) ನಿಯಮಗಳು ಹಾಗೂ 1967ರ ಕರ್ನಾಟಕ ಅಬಕಾರಿ ಸನ್ನದುಗಳ (ಸಾಮಾನ್ಯ ಷರತ್ತುಗಳು) ನಿಯಮಾವಳಿಗಳ ಪ್ರಕಾರ, ಸನ್ನದು ಮಂಜೂರಾತಿಗೆ ಅರ್ಹವಾಗಿದ್ದಲ್ಲಿ ಜಿಲ್ಲೆಯ ಅಬಕಾರಿ ಉಪ ಆಯುಕ್ತರು ಮಂಜೂರಾತಿಗಾಗಿ ಪ್ರಸ್ತಾಪವನ್ನು ಅಬಕಾರಿ ಆಯುಕ್ತರಿಗೆ ಸಲ್ಲಿಸುವರು.

5) ಅಬಕಾರಿ ಆಯುಕ್ತರು ಪ್ರಸ್ತಾಪವನ್ನು ಪರಿಶೀಲಿಸಿ ಸೂಕ್ತವೆಂದು ಕಂಡುಬಂದಲ್ಲಿ ಸನ್ನದು ನೀಡಲು ಪೂರ್ವಮಂಜೂರಾತಿಯನ್ನು ನೀಡುವರು.

6) ಈ ಪೂರ್ವಮಂಜೂರಾತಿ ಮೇರೆಗೆ ಜಿಲ್ಲೆಯ ಅಬಕಾರಿ ಉಪ ಆಯುಕ್ತರು ಸನ್ನದನ್ನು ನೀಡುವರು.

ಬೆಂಗಳೂರು ನಗರದಲ್ಲಿ ಪೋಲೀಸ್ ಟ್ರಾಫಿಕ್ ಸಹಾಯವನ್ನು ಉತ್ತಮ ಪಡಿಸುವುದು

691 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಬೆಂಗಳೂರು ನಗರದಲ್ಲಿ ಟ್ರಾಫಿಕ್ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ಸರ್ಕಾರ ವಿನೇನು ಜಾಗ್ರತ ಕ್ರಮ ಹಾಕಿಕೊಂಡಿದೆ.

2) ನಾಗರೀಕರಿಗೆ ಟ್ರಾಫಿಕ್ ಸಹಾಯ ಉತ್ತಮಗೊಳಿಸಲು ಸರ್ಕಾರ ಹಾಕಿ ಕೊಂಡಿರುವ ಯೋಜನೆಗಳಾವುವು?

3) ನಾಗರೀಕರು ರಸ್ತೆ ದಾಟಲು ಅನುಭವಿಸುತ್ತಿರುವ ತೊಂದರೆಗಳನ್ನು ಅರಿಯಲು ಹಾಗೂ ಅದಕ್ಕೆ ಸಮಗ್ರವಾಗಿ ಪರಿಹಾರ ಕಂಡು ಹಿಡಿಯಲು, ಸರ್ಕಾರ ಹಾಕಿಕೊಂಡಿರುವ ಯೋಜನೆಗಳಾವುವು?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಗೃಹ ಸಚಿವರು) :

1) ರಸ್ತೆ ಸಂಚಾರ ನಿಯಮಗಳನ್ನು ಕಟ್ಟು ನಿಟ್ಟಾಗಿ ಜಾರಿಗೊಳಿಸಲಾಗಿದೆ. ರಸ್ತೆ ಸಂಚಾರ ನಿಯಮಗಳ ಉಲ್ಲಂಘನೆ ಮಾಡಿದವರ ವಿರುದ್ಧ ನೋಂದಾಯಿಸಲಾದ ಮೊಕದ್ದಮೆಗಳ ಸಂಖ್ಯೆ ಈ ಕೆಳಕಂಡಂತಿದೆ :

1993	3,12,695
1994	7,44,135
1995	5,94,296

2) ಸಂಚಾರ ನಿಯಂತ್ರಣಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಸಂಚಾರ ವಿಭಾಗದ